ಡಾ॥ ಹೆಚ್.ಸಿ. ಮಹಾದೇವಪ್ಪ : ಬೇರೆ ಯಾರಿಗೋ ಕೊಡುವುದಾಗಲಿ ಅಥವಾ ಜಿಲ್ಲಾ ಪರಿಷತ್ತಿನಿಂದ ಕಟ್ಟಲಿಕ್ಕೆ ಕೆ. ಹೆಚ್.ಎಸ್.ಪಿ. ಯಿಂದ ಅವಕಾಶ ಇಲ್ಲ. ಇಂಟರ್‌ನ್ಯಾಷನಲ್ ಬಿಡ್ ಮುಖಾಂತರ ನಾವೇ ಮಾಡುವುದರಿಂದ ಈಗ ಅದು ಡೂಪ್ಲಿಕೇಷನ್ ಆಗಬಾರದು ಎಂದು ಹೇಳಿ ಸ್ಥಗಿತಗೊಳಿಸಿದ್ದಾರೆ. ಉಳಿದ ಕೆಲಸವನ್ನು ಮೂರು - ನಾಲ್ಕು ತಿಂಗಳಲ್ಲಿ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಇದು ಆಗುವುದಿಲ್ಲ. ಮೂರು - ನಾಲ್ಕು ತಿಂಗಳೆಂದರೆ ಆಗುವುದಿಲ್ಲ. ಇನ್ನು ಎರಡು ತಿಂಗಳೇ ಇರುವುದು. ಮತ್ತೆ ಮಳೆ ಹಿಡಿಯುತ್ತದೆ.

ಧಾರವಾಡ ಜಿಲ್ಲೆಯಲ್ಲಿನ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು

113 (344) ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಹುಬ್ಬಳ್ಳಿ ನಗರದಿಂದ ಟ್ಯಾಂಕರ್‌ಗಳ ಮೂಲಕ 2-3 ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಟ್ಯಾಂಕರ್‌ಗಳಿಂದ ಒದಗಿಸುವ ನೀರು ಸಮಯಕ್ಕೆ ಹಾಗೂ ಸರಿಯಾಗಿ ಸಾಕಷ್ಟು ದೊರೆಯದೆ ಗ್ರಾಮದ ನಿವಾಸಿಗಳು ಕುಡಿಯುವ ನೀರಿಗಾಗಿ ಕೋಲಾಹಲವಾಗುತ್ತಿರುವ ಬಗ್ಗೆ ಸಾಕಷ್ಟು ದಿನಪತ್ರಿಕೆಗಳಲ್ಲಿ (ಸಂಯುಕ್ತ ಕರ್ನಾಟಕ ದಿನಪತ್ರಿಕೆ) ಪ್ರಕಟಣೆ ಯಾಗಿದ್ದರೂ ಸಹ ಸರ್ಕಾರದವರು ಇದುವರೆವಿಗೂ ಕುಡಿಯುವ ನೀರಿನ ಪರಿಹಾರಕ್ಕಾಗಿ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವಲ್ಲವೆ?

3) ಹಾಗಿದ್ದಲ್ಲಿ ಇಂತಹ ಅತಿ ದೊಡ್ಡ ಪ್ರಮಾಣದ ಕುಡಿಯುವ ನೀರಿನ ಸಮಸ್ಯೆಯನ್ನು ಇದುವರೆವಿಗೂ ಪರಿಹರಿಸದಿರುವುದರಿಂದ ಸರ್ಕಾರದವರು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಶಾಶ್ವತ ಕುಡಿಯುವ ನೀರನ್ನು ಒದಗಿಸಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಬಂದಿದೆ.

2) ಈ ಬಗ್ಗೆ ಜಿಲ್ಲಾಧಿಕಾರಿಗಳು, ಧಾರವಾಡ ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದು, ಫೆಬ್ರವರಿ - 98ರ ಕೊನೆಯವಾರದಿಂದ ಟ್ಯಾಂಕರ್‌ಗಳ ಮೂಲಕ ಸಾಕಷ್ಟು ಕುಡಿಯುವ ನೀರನ್ನು ಗ್ರಾಮಸ್ಥರಿಗೆ ಒದಗಿಸಲಾಗುತ್ತಿದೆ.

3) ಈ ಗ್ರಾಮವು ಸವಳು ನೀರಿನ ವಲಯದಲ್ಲಿದ್ದು, ಗ್ರಾಮದಿಂದ 8-10 ಕಿ.ಮೀ ಪರಿಮಿತಿಯೊಳಗೆ ಸಿಹಿನೀರು ಸಿಗುವ ಸಂಭವವಿಲ್ಲದ ಕಾರಣ, ಕೊಳವೆಬಾವಿಯಿಂದ ಶಾಶ್ವತ ನೀರು ಸರಬರಾಜು ಮಾಡುವುದು ಕಾರ್ಯಸಾಧ್ಯವಿರುವುದಿಲ್ಲ. ಇಂತಹ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಯ ಅಂಗಳ ಹೂಳನ್ನು ತೆಗೆದು ಕುಡಿಯುವ ನೀರಿನ ತೊಂದರೆ ನಿವಾರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ ಆ ಗ್ರಾಮದಿಂದ ಎಂಟು - ಹತ್ತು ಕಿಲೋ ಮೀಟರ್‌ವರೆಗೆ ಯಾವುದು ಸೋರ್ಸ್ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಸೋರ್ಸ್ ಹುಡುಕಿ ಅವರಿಗೆ ಪೈಪ್ ವಾಟರ್ ಸಪ್ಲೈ ಮಾಡುವುದೇ ಸರ್ಕಾರದ ಜವಾಬ್ದಾರಿ. ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್‌ನೊಳಗೂ ಸಹಿತ ಈ ರೀತಿ ಹ್ಯಾಬ್ಲಾಮ್ಯಾಟಿಕ್ ವಿಲೇಜಸ್‌ಗೆ ವಾಟರ್ ಸಪ್ಲೈ ಮಾಡುವ ಯೋಜನೆ ಇದೆ. ಅದಕ್ಕೆ ದಯವಿಟ್ಟು ಸೋರ್ಸ್ ಹುಡುಕಿ ಇದನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಭರವಸೆಯನ್ನೂ ಕೊಡಿ. ಮತ್ತೆ ಟ್ಯಾಂಕರ್ಸ್‌ನಿಂದ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುತ್ತೇವೆ ಎನ್ನುವುದು ಸರಿಯಾಗುವುದಿಲ್ಲ. ಅಥವಾ ಕೆರೆ ಹೂಳು ತೆಗೆಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎನ್ನುವುದು ಸರಿಯಾಗುವುದಿಲ್ಲ. ನಿನ್ನೆ ನೀವು ಟ್ಯಾಂಕರ್ಸ್‌ನಿಂದ ಸಪ್ಲೈ ಮಾಡುವ ನೀರನ್ನು ಕುಡಿದು ನಿನ್ನೆ ಅಲ್ಲಿ ಒಂದು ಸಾವಾಗಿದೆ. ಅದಕ್ಕೆ ದಯವಿಟ್ಟು ಬೇಗ ನಾವು ಸೋರ್ಸ್ ಹುಡುಕಿ ಪೈಪ್ಡ್ ವಾಟರ್‌ನ್ನು ಸಪ್ಲೈ ಮಾಡುತ್ತೇನೆ ಎನ್ನುವ ಕಮಿಟ್‌ಮೆಂಟನ್ನು ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಇವರು ಈಗ ನೇರವಾಗಿ ಭರವಸೆ ಕೊಡಿ ಎನ್ನುತ್ತಾರೆ. ವಾಟರ್ ಸೋರ್ಸ್ ನಿಮಗೆ ಗೊತ್ತಿದೆ. ಆ ಸ್ಥಳದಲ್ಲಿ ಇಲ್ಲ. ಏಳು ಕೊಳವೆಬಾವಿಗಳನ್ನು ತೆರೆದಾಯಿತು. ಅದರಲ್ಲಿ 6 ಕೊಳವೆಬಾವಿಗಳಲ್ಲಿ ನೀರು ಇಲ್ಲ. ಒಂದರಲ್ಲಿ ನೀರು ಇದೆ. ಅದು ಸಲೈನ್ ವಾಟರ್. ಅದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಅದನ್ನು ಪೈಪ್ ವಾಟರ್ ಸಪ್ಲೈ ಮುಖಾಂತರ ಕೊಡುತ್ತಿದ್ದಾರೆ. ಅದನ್ನು ಡೊಮೆಸ್ಟಿಕ್‌ಗೆ ನೇರ ಪರಪಸ್‌ಸ್‌ಗೆ ಯೂಸ್ ಮಾಡುತ್ತಾರೆ. ಒಂದು ಕೆರೆ ಇತ್ತು. ಅಲ್ಲಿ 3 ಲಕ್ಷ ರೂಪಾಯಿ ಖರ್ಚು ಮಾಡಿ ಹೂಳು ತೆಗೆಸಿದೆವು. ಕಳೆದ ಎರಡು ವರ್ಷದಿಂದ ಮಳೆ ಇಲ್ಲ. ಆ ಕೆರೆಯಲ್ಲಿ ನೀರು ಇಲ್ಲ. ಈಗ ಏನಾಗಿದೆ ಎಂದರೆ the whole area is saline ನೀರು ಸಿಗುವುದಿಲ್ಲ. ಈಗ ನಾವು ಏನು ಮಾಡುತ್ತಿದ್ದೇವೆ, ಟ್ಯಾಂಕ್ ವಾಟರ್‌ನಲ್ಲಿ ಪ್ರತಿ ದಿವಸ 20 ಸಾವಿರ ಲೀಟರ್ ನೀರನ್ನು ನಾವು ಸಪ್ಲೈ ಮಾಡುತ್ತಿದ್ದೇವೆ. As on date we are supplying ,..ಆಸ್ ಆನ್ ಡೇಟ್ ನಾವು ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕ ಮಾಡಿದಾಗ ಅವರು ಮಾಹಿತಿ ಕೊಟ್ಟಿದ್ದಾರೆ. ಒಟ್ಟಾರೆ ಆ ಗ್ರಾಮದಲ್ಲಿ 1692 ಜನರು ಇದ್ದಾರೆ. ಅವರು ಹೇಳಿರುವ ಒಂದು ವಿಚಾರವನ್ನು ಒಪ್ಪುತ್ತೇನೆ. ಸೋರ್ಸ್‌ನ್ನು We will have to find out, ಎಲ್ಲೋ ಒಂದು ಕಡೆ ಸ್ವೀಟ್ ವಾಟರ್ ಸಿಗುವ ಕಡೆ ಜಾಗ ಮಾಡಿ ಅದನ್ನು ಪರಿಶೀಲನೆ ಮಾಡಿ we will have to take up this. We will make an attempt to do that. But don't ask me to make a commitment to give within 3 or 6 months.

ಶ್ರೀ ಮಹದೇವಪ್ಪ ಅಕ್ಕಿ : ಮಾನ್ಯ ಅಧ್ಯಕ್ಷರೆ, ಈ ಜಾಕಲಬ್ಬಿ ಗ್ರಾಮ ನಮ್ಮ ಕ್ಷೇತ್ರದಲ್ಲಿ ಬರುವುದರಿಂದ ಜಾಕಲಬ್ಬಿ ಗ್ರಾಮಕ್ಕೆ ಅಷ್ಟೇ ಅಲ್ಲ, ನಾವು ನೀರು ಟ್ಯಾಂಕರ್‌ಗಳ ಮುಖಾಂತರ ಸಪ್ಲೈ ಮಾಡುತ್ತಿಲ್ಲ, ಬೇರೆ ಹಳ್ಳಿಗಳಿಗೆ ಸಹಿತ ನಾವು ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡುತ್ತಿದ್ದೇವೆ. ಈಗಾಗಲೇ ನಾವು ನಾಲ್ಕೈದು ಬೋರು ಹೊಡೆಸಿದರೂ ಸಹಿತ ಆ ಗ್ರಾಮಕ್ಕೆ ನೀರು ಬೀಳಲಿಲ್ಲ. ಆ ಗ್ರಾಮದ ಸುತ್ತಲೂ ಎಂಟು ಹತ್ತು ಕಿಲೋ ಮೀಟರ್ ನಾವು ನೀರು ಸಿಗುತ್ತದೆಯೇ ಎಂದು ಪರೀಕ್ಷೆ ಮಾಡಿಸಿದರೂ ಸಹಿತ ಅಲ್ಲಿ ನೀರು ಸಿಗದೇ ಇದ್ದ ಕಾರಣ ಟ್ಯಾಂಕರ್ ಮೂಲಕ ನೀರನ್ನು ಆ ಊರಿಗೆ ಸರಬರಾಜು ಮಾಡುತ್ತಿದ್ದೇವೆ. ಅದರಂತೆ ಎರೆಬುದಾಳ, ಬಾಗವಾಡ ಹಾಗೂ ಕೊಡಲಿವಾಡ ಅಲ್ಲಿಯೂ ಸಹಿತ ನೀರಿನ ಸಮಸ್ಯೆ ಇದೆ. ಈ ವರಹಾ ನದಿಯಿಂದ ಏನಾದರೂ ಒಂದು ಸ್ಕೀಮನ್ನು ಮಾಡಿ ಶಾಶ್ವತವಾಗಿ ಅಲ್ಲಿ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ನಾವು ಈಗಾಗಲೇ ಆ ಕೆರೆಯ ಹೂಳನ್ನು

ತೆಗೆಸಿದ್ದೇವೆ. ಆದರೂ ಹೋದ ವರ್ಷ ಆ ಕೆರೆಗೆ ನೀರು ಬರಲಿಲ್ಲ. ಆದ್ದರಿಂದ ಕೆಲವೊಂದು ಸಮಸ್ಯಾತ್ಮಕ ಹಳ್ಳಿಗಳು ಇದ್ದಾವೆ, ಆ ಹಳ್ಳಿಗಳಿಗೆ ಶಾಶ್ವತವಾಗಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, Whatever answer is given it is correct because it is not taken up under KHSDP. ಅದನ್ನೇ ನಾನು ಹೇಳಿದೆ. ನಿಜ ಪಾಪ ದೂರದಿಂದ ನೀರನ್ನು ತರಬೇಕಾಗುತ್ತದೆ. ಇದರ ಸಾಧಕ ಭಾದಕಗಳನ್ನು ವಿಚಾರ ಮಾಡಬೇಕಾಗುತ್ತದೆ. ಇವೆಲ್ಲಾ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳು. ಏಕೆಂದರೆ ಅಲ್ಲಿ ನೀರು ಇಲ್ಲ. ಸಿಗುತ್ತಿರುವ ನೀರು ಸಲೈನ್ ವಾಟರ್. ಈ ಪರಿಸ್ಥಿತಿ ನಮಗೆ ಗೊತ್ತಿದೆ. These are all problematic villages. We will make honest attempts to do something.

ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ

(341) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪರಿಸರ, ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

2) ಆ ಪರಿಸರ ಮಾಲಿನ್ಯ ಹೆಚ್ಚಲು ಪ್ರಮುಖ ಕಾರಣಗಳೇನು?

3) ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯದಿಂದ ನಾಗರೀಕರ ಮೇಲೆ ವಿಶೇಷವಾಗಿ ಚಿಕ್ಕಮಕ್ಕಳ ಮೇಲೆ ಆಗುತ್ತಿರುವ ದುಷ್ಪರಿಣಾಮವನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ನೀ ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ, ಅಸಂಪ್ರದಾಯಕ ಇಂಧನ ಸಚಿವರು)

1) ಈ ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣಗಳು.

ಅ) ತೆರೆದ ಚರಂಡಿಗಳಲ್ಲಿ ಹರಿಯುವ ಗೃಹ ಬಳಕೆಯ ಕಲುಷಿತ ನೀರು.

ಆ) ಹೊಸ ಬಡಾವಣೆಗಳಿಂದ ಒಳಚರಂಡಿ ಮಾಡದೆ ಪರಿದು ಬರುವ ಕಲುಷಿತ ನೀರು.

ಇ) ಗೃಹಗಳಿಂದ ಬರುವ ಅಸಮರ್ಪಕವಾದ ರೊಚ್ಚಿನ ವಿಲೇವಾರಿ

ಈ) ಆಸ್ಪತ್ರೆ, ಹೋಟೆಲ್ ಹಾಗೂ ಕಲ್ಯಾಣ ಮಂಟಪಗಳಿಂದ ಹೊರ ಹೊಮ್ಮುವ ನಿರುಪಯುಕ್ತ ಘನ ವಸ್ತುಗಳು

ಉ) ಭಾರಿ, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಹೊರಹೊಮ್ಮುವ ಮಾಲಿನ್ಯ.

ಊ) ಕಟ್ಟಡ ನಿರ್ಮಾಣ ಕಾರ್ಯದಿಂದ ಉತ್ಪತ್ತಿಯಾಗುವ ಘನ ಪದಾರ್ಥಗಳ ಅಸಮರ್ಪಕ ವಿಲೇವಾರಿ.